# ನಾನು ನರ್ತಿಸುತ್ತೇನೆ..

ನಾನು ನರ್ತಿಸುತ್ತೇನೆ
ನಮ್ಮ ಮೇಲೆ ಯಾರದೋ ಕಣ್ಣು ಬಿದ್ದಾಗ

ಅವರ ಬಂದೂಕಿನ
ಗುಂಡುಗಳು
ನಮ್ಮ ಮರ್ಮಾಂಗ ಹೊಕ್ಕು
ಗರ್ಭ ಧರಿಸಲು ಸಜ್ಜಾದಾಗ

ಮತ್ತೆ
ಯಾರೋ ಬಿಳಿಯ ಸಾಹೇಬರು ಬಂದಿದ್ದಾರೆ
ಅವರ ಸೇಬು ಗಲ್ಲದ ಹೆಂಡತಿ ಮಕ್ಕಳ ಮುಂದೆ
ಹಾಡಿ ಕುಣಿಯಿರಿ
ನಿಮ್ಮ ಶ್ರೀಮಂತ ಸಂಸ್ಕೃತಿ ಪ್ರದರ್ಶನ ಮಾಡಿ ಎಂದಾಗ
ನಾನು ನರ್ತಿಸುತ್ತೇನೆ!

ಅವರು ಕರುಣದ ಕೂಸು ಎಂಬಂತೆ
ಎಸೆದು ಹೋಗುವ ಎಂಜಲು ಕಾಸು
ಈ ನಿರಾಶ್ರಿತ ಬಯಲ ಬಂಧಿ ಖಾನೆಯ
ಹೊಟ್ಟೆ ಹೊರೆಯುತ್ತದೆ

ಅಬ್ಬಾ! ಉಳ್ಳವರ ಸರಳತೆ ಮತ್ತು ಎಣೆಯಿಲ್ಲದ ಕಾರುಣ್ಯ
ಎಷ್ಟೊಂದು ಭಾರ!

ಬೂಟುಗಾಲಿನ ಸದ್ದು ಕೇಳ ಕೇಳುತ್ತಾ
ನಾನು ನರ್ತಿಸುತ್ತೇನೆ

ಅಲ್ಲಿ
ನಮ್ಮ ಹೊಲ ಮನೆ
ಪೂರ್ವಿಕರ ಸಮಾಧಿಗಳು
ಮೈ ಮುರಿಯುತ್ತಾ ಆಕಳಿಸುತ್ತವೆ

ಇಲ್ಲಿ ಗಡಿದಾಟಲು ಹಾತೊರೆವ
ನೂಕು ನುಗ್ಗಲಿನಲಿ
ನಮ್ಮ ಬೇವರ್ಸಿ ಕನಸುಗಳು
ಸಾಲುಗಟ್ಟಿ ನಿಲ್ಲುತ್ತವೆ

ನಾನು ಕುಣಿಯುತ್ತಾ ಕುಣಿಯುತ್ತಾ
ಅಕ್ಷಾಂಶ ರೇಖಾಂಶಗನ್ನು ದಾಟಿ ಹೋಗುತ್ತೇನೆ
ಭೂಗೋಳದ ಮಾಸ್ತರ ಹೇಳುವ ಹಾಗೆ
ಇವು ಖಂಡಿತ ಕಾಲ್ಪನಿಕ ರೇಖೆಗಳಲ್ಲ

ಒಂದಡಿ ಇಟ್ಟರೆ ಆ ಕಡೆ
ಮರಣ
ಒಂದಡಿ ಇಟ್ಟರೆ ಈ ಕಡೆ
ಜನನ
ಜನನ ಮರಣದ ನಡುವೆ
ತೂಗು ಮಿಂಚಾಗಿ
ಹಸಿದ ಗುಡುಗಾಗಿ
ಬರ ಸಿಡಿಲಾಗಿ
ನಾನು ನರ್ತಿಸುತ್ತೇನೆ

ನಿರಾಶ್ರಿತ ಶಿಬಿರದ ಆಕಾಶ
ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದಂತೆ
ಸಮವಸ್ತ್ರ ಧರಿಸಿದ
ಗಂಡು ನಾಯಿಗಳು
ಎಲ್ಲಿ ಪರಾರಿಯಾಗುತ್ತವೋ?
ಗೊತ್ತಾಗುತ್ತಿಲ್ಲ..
ಸದ್ಯಕ್ಕೆ ಗೊತ್ತಾಗುತ್ತಿಲ್ಲ!

# ದೇಶ ಪ್ರೇಮ

ದೇಶದ ಗಡಿ ಎಂದರೆ

ಪ್ರೇಮ ಮತ್ತು ಅತ್ಯಾಚಾರದ ನಡುವಿನ
ಸರಳ ರೇಖೆ

ಕ್ಷಮಿಸಿ

ದೇಶ ಪ್ರೇಮ ಮತ್ತು ದೇಶದ್ರೋಹದ ನಡುವಿನ
ನಿರ್ಣಾಯಕ

ಗೆರೆ